ಆಕೆಗೆ ಅಮೆರಿಕನ್ ರ್‍ಯಾಪ್, ಪಾಪ್, ಜಾಸ್, ಮೆಟಲ್ ಸಂಗೀತವಂತೂ ಹುಚ್ಚೇ ಹಿಡಿಸಿಬಿಟ್ಟಿದೆ. 'ಅಮೆರಿಕನ್ ಐಡಲ್', 'ದಿ ವಾಯ್ಸ್', 'ಅಮೆರಿಕಾ'ಸ್ ಗಾಟ್ ಟ್ಯಾಲೆಂಟ್' ರಿಯಾಲಿಟಿ ಷೋಗಳು ಅವಳ ಪ್ರಯಾರಿಟಿಯ ಉತ್ತುಂಗ ಪಟ್ಟಿಯಲ್ಲಿ ರಾರಾಜಿಸುತ್ತಿವೆ. 2009ರ ಹಾರ್ಟ್ ಥ್ರೋಬ್ ಆಡಮ್ ಲ್ಯಾಂಬ್‌ಬರ್ಟ್‌ನ ಜಾತಕವನ್ನು ದಿನಕ್ಕೊಂದಿಪ್ಪತ್ತು ಬಾರಿ ಕೆದಕಿ, ಹುಡುಕಬಾರದನ್ನೆಲ್ಲಾ ಹುಡುಕುತ್ತಿದ್ದಾಳೆ. ಅವನ 'ಅನದರ್ ಲೋನ್ಲಿ ನೈಟ್' ಅವಳನ್ನು ಮಂತ್ರಮುಗ್ಧಗೊಳಿಸಿಬಿಟ್ಟಿದೆ.

ಸುಳ್ಳು ನಂಬರ್ ಟೂ: 'ಅಮೆರಿಕನ್ ಐಡೋಲ್' ಸೀಸನ್–8ರ ಕಾಲದಲ್ಲಿನ್ನೂ ಚೆನ್ನೈನಲ್ಲಿದ್ದ ...ಳು, ಆಡಮ್ ಲ್ಯಾಂಬ್‌ಬರ್ಟ್‌ಗೆ ಓಟು ಹಾಕುವುದಿರಲಿ, ಅವನ್ಯಾರೆಂದು ಎಳ್ಳಷ್ಟೂ ಅರಿಯದವಳು, ಅಮೆರಿಕಾಗೆ ಬಂದ ನಂತರ ಸೆಕ್ಸೀ ಕೂದಲಿನ, ಕಿವಿಗೆ ಒಂಟಿ, ಕಣ್ಣಿಗೆ ಕಾಡಿಗೆ ಹಚ್ಚಿದ ಆಡಮ್ ಲ್ಯಾಂಬ್‌ಬರ್ಟ್‌ನ ಮನಮೋಹಕ ರೂಪಿಗೆ ಮರುಳಾದಳು, ಅವನು ಗೇ ಎಂದು ತಿಳಿದಂದಿನಿಂದ ಅತ್ಯಂತ ನಿರಾಶೆಯಲ್ಲಿ ವರ್ಷಾನುಗಟ್ಟಲೆ(?) ಊಟ ತಿಂಡಿ ಬಿಟ್ಟಿದ್ದಾಳೆ. ಇದೀಗ ಚೇತರಿಸಿಕೊಳ್ಳುತ್ತಿರುವ ಆಕೆ, ಎಮಿನಮ್‌ನಂತೆ ಸಹಸ್ರ ಪ್ಯಾಕೆಟ್‌ಗಳ ದೊಗಲೆ ಪ್ಯಾಂಟ್ ಧರಿಸಿ, ಅಂತಹದ್ದೇ ಕ್ಯಾಪ್ ತೊಟ್ಟು, ಅವನಂತೇ ಎರಡೂ ಕೈಗಳನ್ನು ಆಕಡೆ, ಈಕಡೆ ಆಡಿಸಿ, 'ಲೂಸ್ ಯುವರ್ ಸೆಲ್ಫ್' ಎಂದು ಯೂನಿವರ್ಸಿಟಿಯ ಕಾರ್ಯಕ್ರಮದಲ್ಲಿ ರ್‍ಯಾಪ್ ಹಾಡಿದ ಹುಡುಗನೊಬ್ಬ ಅವಳೊಳಗೆ ಕನಸಿನ ಚಿತ್ತಾರವನ್ನು ಬಿಡಿಸುತ್ತಿದ್ದಾನೆ. ಸದ್ಯಕ್ಕೆ ಅಮೆರಿಕಾದ ಲೈಫ್ ಸ್ಟೈಲ್ ಅವಳನ್ನು ಇನ್ನಿಲ್ಲದಷ್ಟು ಆವರಿಸಿಕೊಳ್ಳುತ್ತಿರುವುದರಿಂದ ಜೀವನ ಎನ್‌ಜಾಯ್ ಮಾಡುವುದರಲ್ಲಿ ಅವಳು ಬ್ಯುಸಿ.

ಸುಳ್ಳು ನಂಬರ್ ಥ್ರೀ: ಹಗಲೂರಾತ್ರಿ ಆ ಹುಡುಗನಿಗೆ ಫೋನ್ ಹಚ್ಚುತ್ತಾ, ಎಸ್.ಎಮ್.ಎಸ್. ಮಾಡುತ್ತಾ, ಇ – ಮೇಲ್ ಕಳುಹಿಸುತ್ತಾ, ಚಾಟ್‌ನಲ್ಲಿ ಹರಟುತ್ತಾ ಅವಳು ತನ್ನ ಪ್ರೀತಿಯನ್ನು ನಿವೇದಿಸಿಕೊಂಡಿದ್ದಾಳೆ. ಆದರೆ, ಅವನಿಗೆ ಅವಳಲ್ಲಿ ಅಂತಹ ಆಸಕ್ತಿಯಿಲ್ಲ. ಸುಮ್ಮನೆ ಸತಾಯಿಸುತ್ತಿದ್ದಾನೆ. ದಿನಕ್ಕೊಂದು ಕತೆಯ ಬ್ರಿಟ್ನಿ ಸ್ಪಿಯರ್ಸ್, ಪ್ಯಾರಿಸ್ ಹಿಲ್ಟನ್‌ರ ಚರಿತ್ರೆಯೆನ್ನೆಲ್ಲಾ ಬ್ರೌಸ್ ಮಾಡಿ ಜಾಲಾಡಿದ ನಂತರ ಸದ್ಯಕ್ಕೆ ಹಾಟ್ ಗರ್ಲ್ ಟೇಲರ್ ಶಿಫ್ಟ್ ಬಗ್ಗೆ ಇನ್ನಿಲ್ಲದಷ್ಟು ಕುತೂಹಲಿಯಾಗಿ ಸದಾ ಅವಳ ಸಂಪೂರ್ಣ ಚರಿತ್ರೆಯ ಅಧ್ಯಯನದಲ್ಲಿ ಮುಳುಗಿರುವ ಅವನಿಗೆ ದೇಶೀ ಹೆಣ್ಣುಗಳು ಅಷ್ಟಕಷ್ಟೇ. ಅಮೆರಿಕಾದಲ್ಲಿ ಹುಟ್ಟಿ ಬೆಳೆದವನಿಗೆ ಭಾರತವೂ ಅಷ್ಟಕಷ್ಟೇ.

ಸುಳ್ಳು ನಂಬರ್ ಫೋರ್: ಘನಘೋರ ಸತ್ಯವೇನೆಂದರೆ, ಈಗ ಅವಳಿಗೆ ಅವಳೂರಿನ ಯಾವ ಗಂಡುಗಳೂ ರುಚಿಸುತ್ತಿಲ್ಲ. ವಯಸ್ಸಾದ ಅವಳ ಪೋಷಕರು ಮದುವೆಗೆ ಒತ್ತಾಯಿಸುತ್ತಿದ್ದರೂ, ಮದುವೆ ಮುಂದೂಡುವುದಕ್ಕೆ ಸಕಲ ಕಾರಣಗಳನ್ನೂ ಹುಡುಕುತ್ತಿದ್ದಾಳೆ.

ಇಲ್ಲಿಗೆ ಹುಡುಗಿಯ ಚಾರಿತ್ರಾ ವಿವರಕ್ಕೆ ಬೇಕಾದ ಸರಕುಗಳೆಲ್ಲಾ ಖಾಲಿ.

ಈಗ ಆ ಹುಡುಗಿಗೆ ಉಪ್ಪು ನೀರಿನಲ್ಲಿ ಕಾಲಾಡಿಸಲು ಬಿಡೋಣ. ಇದೀಗ ಪ್ರವೇಶಿಸಿದ ಹೊಸ ಪಾತ್ರದ ಬಗ್ಗೆ ಯೋಚಿಸೋಣ.

ಅಮೆರಿಕಾದಲ್ಲೇ ಹುಟ್ಟಿ ಬೆಳೆದ ಹುಡುಗನೆಂದರೆ ಎನ್.ಆರ್.ಐ. ಒಬ್ಬನ ಮಗನೆಂಬುದು ಗ್ಯಾರಂಟಿ. ಆದರೆ, ಅವನಪ್ಪ ಯಾರು, ಭಾರತ ಬಿಟ್ಟು ಯಾವಾಗ ಅಮೆರಿಕಾಗೆ ಹೋದ, ಅವನಿಗೆ ಅಲ್ಲೇನು ಕೆಲಸ ಎಂಬ ವಿವರಗಳೆಲ್ಲಾ ಕಟ್ಟಿಕೊಂಡು ಆಗಬೇಕಾದ್ದಾದರೂ ಏನು? ಸುಮ್ಮನೇ ಇಲ್ಲದ ರಗಳೆಯೆಲ್ಲಾ ಯಾಕೆ? ತಲೆ ಬಿಸಿ ಮಾಡಿಕೊಳ್ಳದೇ ಸೀದಾ ಅಪ್ಪನನ್ನು ಭಾರತಕ್ಕೆ ಕರೆಸಿಕೊಳ್ಳೋಣ.

ಬುರುಡೆ ನಂಬರ್ ಒನ್: ಸದ್ಯಕ್ಕೆ ಆ ಹುಡುಗನ ಅಪ್ಪ ಭಾರತಕ್ಕೆ ಬಂದಿಳಿದಿದ್ದಾರೆ. ಮಧುಬಾಲ, ವೈಜಯಂತಿಮಾಲ, ಹೇಮಮಾಲಿನಿ, ಐಶ್ವರ್ಯಾ ರೈ ಬಚ್ಚನ್‌ರಂತಹ ಸುಂದರ